ಉ) ಹಾಗಾದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :–

ಅ) ಹೌದು.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತುಮಕೂರು–ಚೇಳೂರು ನಡುವೆ ಒಂದು ಸುತ್ತಿನ ಮತ್ತು ತುಮಕೂರು–ಇಡಗೂರು ನಡುವೆ 2 ಸುತ್ತಿನ ಸಾರಿಗೆ ಸೌಲಭ್ಯವನ್ನು ಈ ಕೆಳಕಂಡ ವೇಳೆಯಲ್ಲಿ ಕಲ್ಪಿಸಿತ್ತು.

1) ತುಮಕೂರು — ಚೇಳೂರು

1215	ತುಮಕೂರು	1430	
1030	ಚೇಳೂರು	1545	

2) ತುಮಕೂರು — ಇಡಗೂರು

0830	1615	ತುಮಕೂರು	1115	2030
0645	1400	ಇಡಗೂರು	1330	2215

ಇ) ಹೌದು.

ಆದಾಯವು ಉತ್ತೇಜನಕಾರಿಯಾಗಿಲ್ಲದಿದ್ದುದರಿಂದಲೂ ಮತ್ತು ಡೀಸಲ್ ಪೂರೈಕೆಯಲ್ಲಿ ಕಡಿತವಾದುದರಿಂದಲೂ ಈ ಸಾರಿಗೆಗಳನ್ನು ರದ್ದು ಪಡಿಸಲಾಯಿತು. ಆದಾಗ್ಯೂ ರಾತ್ರಿ ತಂಗುವ ಒಂದು ಸುತ್ತು ಸಾರಿಗೆಯನ್ನು ಓಡಿಸಲಾಗುತ್ತಿದೆ.

ಈ) ಪ್ರಯಾಣಿಕರ ಒತ್ತಡದ ಅವಧಿಗೆ ತುಮಕೂರು – ಚೇಳೂರು ನಡುವೆ ಒಂದು ಸಾರಿಗೆಯನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಈಗಾಗಲೇ ತುಮಕೂರು ಇಡಗೂರು ನಡುವೆ ರಾತ್ರಿ ತಂಗುವ ಒಂದು ಸುತ್ತು ಸಾರಿಗೆ ವ್ಯವಸ್ಥೆ ಇರುವುದರಿಂದ ಹಾಗೂ ಸಾಕಷ್ಟು ಪ್ರಯಾಣಿಕರ ಒತ್ತಡ ಇಲ್ಲದಿರುವುದರಿಂದ 11–15 ಕ್ಕೆ ತುಮಕೂರು ಬಿಡುತ್ತಿದ್ದ ಟ್ರಿಪ್ಪನ್ನು ಪುನರಾರಂಭಿಸುವುದು ಸೂಕ್ತವಾಗಿರುವ ವುದಿಲ್ಲ.

ಉ) ಮೇಲಿ (ಈ) ಪ್ರಶ್ನೆಗೆ ಉತ್ತರಿಸಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ತಹಶೀಲ್ದಾರರ ಹುದ್ದೆಯನ್ನು 1ನೇ ದರ್ಜೆಗೆ ಏರಿಸುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 720 (1060)

ಶ್ರೀ ಬಿ. ಹೆಚ್. ಯಂಕಾನಾಯಕ (ಹರಪ್ಪನಹಳ್ಳಿ) :– ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ ?

ಅ) ತಾಲ್ಲೂಕು ಮಟ್ಟದಲ್ಲಿ ಯಾವ ಯಾವ ಅಧಿಕಾರಿಗಳು 1ನೇ ದರ್ಜೆಯ ಅಧಿಕಾರಿಗಳಾಗಿರುತ್ತಾರೆ?

ಆ) ತಹಸೀಲ್ದಾರರ ಕರ್ತವ್ಯಗಳು ಯಾವುವು ಎಂಬುದನ್ನು ವಿವರವಾಗಿ ತಿಳಿಸುವುದು ?

ಇ) ಹೆಚ್ಚಿನ ಕರ್ತವ್ಯಗಳನ್ನು ನಿರ್ವಹಿಸುವ ತಹಸೀಲ್ದಾರರ ದರ್ಜೆಯನ್ನು ಈಗಿನ 2ನೇ ದರ್ಜೆಯಿಂದ 1 ನೇ ದರ್ಜೆಗೆ ಏರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) :–

ಅ) ತಾಲ್ಲೂಕು ಮಟ್ಟದಲ್ಲಿ 1ನೇ ದರ್ಜೆ ಅಧಿಕಾರಿಗಳು.

1) ವೈದ್ಯಾಧಿಕಾರಿಗಳು,
2) ಸಹಾಯಕ ಕಾರ್ಯಪಾಲಕ ಅಭಿಯಂತರರು,
3) ಸಹಾಯಕ ಕೃಷಿ ನಿರ್ದೇಶಕರು,
4) ಸಹಾಯಕ ನಿರ್ದೇಶಕರು (ಪಶುವೈದ್ಯ ಇಲಾಖೆ)

ಆ) ಪಟ್ಟಿಯನ್ನು ಲಗತ್ತಿಸಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ—1

'ತಹಸೀಲ್ದಾರರ ಕರ್ತವ್ಯಗಳು'

1) ಕಾನೂನು ಮತ್ತು ಶಾಂತ ಪಾಲನೆಯ ಜವಾಬ್ದಾರಿ,
2) ಲೋಕಸಭಾ/ವಿಧಾನಸಭಾ/ಸೊಸೈಟಿ/ಪಂಚಾಯ್ತಿಗಳಿಗೆ ಚುನಾವಣೆಗಳನ್ನು ನಡೆಸುವ ಕಾರ್ಯ,
3) ಎಲ್ಲಾ ಜನಗಣತಿಯನ್ನು ನಡೆಸುವ ಕಾರ್ಯಗಳು,
4) ಸರ್ಕಾರಕ್ಕೆ ಬರಬೇಕಾದ ಬಾಕಿ ವಸೂಲಾತಿಗಳು ಅಂದರೆ ಭೂ ಕಂದಾಯ, ನೀರಿನ ತೆರಿಗೆ, ಸಹಕಾರ ಬಾಕಿ, ಅಬಕಾರಿ ಬಾಕಿ ಮತ್ತು ಕೆ.ಎಫ್.ಸಿ.ಎಸ್.ಸಿ.ಸಾಲಗಳು ಇತರೆಗಳು.
5) ಭೂ ದಾಖಲೆ/ಭೂ ಹಕ್ಕು ದಾಖಲೆಗಳನ್ನು ಕಾಪಾಡುವಿಕೆ,
6) ಸರ್ಕಾರಿ ಗಣ್ಯರನ್ನು ಬರಮಾಡಿಕೊಳ್ಳುವುದು, ಸತ್ಕರಿಸುವುದು,
7) ಬೆಂಕಿ ಅಪಘಾತ, ಬರ ಪ್ರವಾಹ ಹಾಗೂ ಇತರೆ ನೈಸರ್ಗಿಕ ವಿಕೋಪಗಳಿಂದ ನೊಂದವರಿಗೆ ಪರಿಹಾರ,
8) ಪಡಿತರ ವಿತರಣೆಗಳ ಲೈಸನ್ಸ್ ಎನ್‌ಫೋರ್ಸ್‌ಮೆಂಟ್ ಮತ್ತು ಅಗತ್ಯ ವಸ್ತುಗಳ ಕಾಯಿದೆಯ ಅನುಷ್ಠಾನ,
9) ರಾಷ್ಟ್ರೀಯ ಉಳಿತಾಯ/ಸಣ್ಣ ಉಳಿತಾಯ ಆಂದೋಲನ ಮಾಡುವುದು,
10) ಸಣ್ಣ ಕುಟುಂಬ ಕಲ್ಯಾಣ ಕಾರ್ಯಕ್ರಮದ ಅನುಷ್ಠಾನ ಇತ್ಯಾದಿ.

ವಿಷಯ :– ನೆಲಮಂಗಲ ಟೌನಿನ ಬಸ್ ನಿಲ್ದಾಣದ ವಿಸ್ತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 721 (1084)

ಶ್ರೀ ಅಂಜನ್ ಮೂರ್ತಿ (ನೆಲಮಂಗಲ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಟೌನಿನಲ್ಲಿರುವ ಬಸ್ ನಿಲ್ದಾಣವು ಬಹಳ ಚಿಕ್ಕದಾಗಿದ್ದು, ವಾಹನಗಳ ನಿಲುಗಡೆಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ವಿಸ್ತಾರವಾದ ಬಸ್ ನಿಲ್ದಾಣ ಕಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ :– ತುಮಕೂರಿನಿಂದ ನೆಲಮಂಗಲಕ್ಕೆ ಬಸ್ ಸೌಕರ್ಯ ಇಲ್ಲದಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 722 (1083)

ಶ್ರೀ ಅಂಜನ ಮೂರ್ತಿ (ನೆಲಮಂಗಲ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರಿನಿಂದ ನೆಲಮಂಗಲಕ್ಕೆ ಹಾಗೂ ನೆಲಮಂಗಲದಿಂದ ತುಮಕೂರಿಗೆ ಸರಿಯಾದ ಬಸ್ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ರೀತಿ ಬಸ್ ಸೌಕರ್ಯ ಬೇಕೆಂದು ಶಾಸಕರಿಂದ ಮನವಿ ಬಂದಿರುವುದು ನಿಜವೇ ? ಹಾಗಿದ್ದಲ್ಲಿ ಆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :–

ಅ) ಬಂದಿದೆ.